# ಕರ್ನಾಟಕ ಲೋಕಾಯುಕ್ತ

ಕಂಪ್ಲೆಂಟ್/ಉಪಲೋಕ್/BD/1878/2021
ಮಂಡನಾಧಿಕಾರಿಗಳ ಶಾಖೆ

ಬಹುಮಹಡಿಗಳ ಕಟ್ಟಡ
ಡಾ. ಬಿ.ಆರ್.ಅಂಬೇಡ್ಕರ್ ವೀದಿ,
ಬೆಂಗಳೂರು, ದಿನಾಂಕ: 13-01-2022.

## ಕರ್ನಾಟಕ ಲೋಕಾಯುಕ್ತ ಕಾಯ್ದೆ, 1984ರ ಕಲಂ 12(3) ರನ್ವಯ ಶಿಫಾರಸ್ಸು ವರದಿ

**ವಿಷಯ:** 1) ಶ್ರೀ ಕೆ.ಹೆಚ್.ಬಾಲಸುಂದರ, ಪತ್ರಾಂಕಿತ ವ್ಯವಸ್ಥಾಪಕರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ವಿಭಾಗ (ಪ್ರಾದೇಶಿಕ), ಚಿಕ್ಕಬಳ್ಳಾಪುರ,

2) ಶ್ರೀ ಜಿ.ಎನ್.ಮೂರ್ತಿ, ಅಧೀಕ್ಷಕರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ವಿಭಾಗ (ಪ್ರಾದೇಶಿಕ), ಚಿಕ್ಕಬಳ್ಳಾಪುರ, - ಆದ ಇವರು ಸರ್ಕಾರಿ/ಸಾರ್ವಜನಿಕ ನೌಕರರಾಗಿದ್ದು, ದುರ್ನಡತೆ ಎಸಗಿರುವ ಬಗ್ಗೆ ಇವರ ವಿರುದ್ಧ ನಡವಳಿ ಕುರಿತು.

1. ಪೊಲೀಸ್ ಉಪಾಧೀಕ್ಷಕರು, ಭ್ರಷ್ಟಾಚಾರ ನಿಗ್ರಹದಳ ಪೊಲೀಸ್ ಠಾಣೆ, ಚಿಕ್ಕಬಳ್ಳಾಪುರ ಜಿಲ್ಲೆ (ಇನ್ನು ಮುಂದೆ ತನಿಖಾಧಿಕಾರಿ ಎಂದು ಕರೆಯಲ್ಪಡುತ್ತಾರೆ). ಇವರು ಸಲ್ಲಿಸಿದ ತನಿಖಾ ವರದಿ ಮತ್ತು ಸಂಬಂಧಿಸಿದ ದಾಖಲೆಗಳನ್ನು ಪರಿಶೀಲಿಸಿದಾಗ, ಸದರಿ ವರದಿಯಲ್ಲಿ 1) **ಶ್ರೀ ಕೆ.ಹೆಚ್.ಬಾಲಸುಂದರ, ಪತ್ರಾಂಕಿತ ವ್ಯವಸ್ಥಾಪಕರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ವಿಭಾಗ (ಪ್ರಾದೇಶಿಕ), ಚಿಕ್ಕಬಳ್ಳಾಪುರ, 2) ಶ್ರೀ ಜಿ.ಎನ್.ಮೂರ್ತಿ, ಅಧೀಕ್ಷಕರು, ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ವಿಭಾಗ (ಪ್ರಾದೇಶಿಕ), ಚಿಕ್ಕಬಳ್ಳಾಪುರ** (ಇನ್ನು ಮುಂದೆ ಎದುರುದಾರರು ಎಂದು ಕರೆಯಲ್ಪಡುತ್ತಾರೆ) ದೂರುದಾರರಾದ **ಶ್ರೀ ನಾಗರಾಜ ಬಿನ್ ಲೇಟ್ ಸುಬ್ಬಣ್ಣ, ಚಿಕ್ಕಬಂದರಘಟ್ಟ ಗ್ರಾಮ, ಬಶೆಟ್ಟಿಹಳ್ಳಿ ಹೋಬಳಿ, ಶಿಡ್ಲಘಟ್ಟ ತಾಲ್ಲೂಕು, ಚಿಕ್ಕಬಳ್ಳಾಪುರ ಜಿಲ್ಲೆ** (ಇನ್ನು ಮುಂದೆ ದೂರುದಾರರು ಎಂದು ಕರೆಯಲ್ಪಡುತ್ತಾರೆ) ಇವರು ಭೇಟಿ ಮಾಡಿದಾಗ ಲಂಚದ ಹಣಕ್ಕೆ ಬೇಡಿಕೆ ಇಟ್ಟು ಅದನ್ನು ಪಡೆದು, ದುರ್ನಡತೆ ತೋರಿಸಿರುವುದು ಮೇಲ್ನೋಟಕ್ಕೆ ಕಂಡು ಬಂದಿದ್ದರಿಂದ, ಕರ್ನಾಟಕ ಲೋಕಾಯುಕ್ತ ಕಾಯ್ದೆ 1984, ಕಲಂ 7(2) ರನ್ವಯ ಗೌರವಾನ್ವಿತ ಉಪಲೋಕಾಯುಕ್ತರು ಸ್ವಯಂ ಪ್ರೇರಿತ ತನಿಖೆಯನ್ನು ಕೈಗೊಂಡಿರುತ್ತಾರೆ.

2. ದೂರಿನ ಸಂಕ್ಷಿಪ್ತ ಮಾಹಿತಿ :-

i) ದೂರುದಾರರು ತನ್ನ ದೂರಿನಲ್ಲಿ, ತಾನು ಟ್ರಾಕ್ಟರ್ ನಂ: ಕೆಎ 40-ಟಿ-5409 ಮತ್ತು ಟ್ರಾಲಿ ಕೆಎ40-ಟಿ-5410 ಮಾಲೀಕರಾಗಿದ್ದು, ದಿನಾಂಕ: 13-2-2017 ರಂದು ದೂರುದಾರರ ತಮ್ಮನಾದ ಬೀರಪ್ಪ ರವರು ತಮ್ಮ ಹೊಲದ ಬಳಿ ಚಪ್ಪರ ಹಾಕಲು ಕೇತನಾಯಕನಹಳ್ಳಿ ಗ್ರಾಮದ ಮೂರ್ತಿ ಎಂಬುವವರ ಬಳಿ ಒಣಗಿರುವ ನೀಲಗಿರಿ ಸೊಪ್ಪನ್ನು ರೂ. 3,000/- ಗಳಿಗೆ ಖರೀದಿಸಿಕೊಂಡಿದ್ದು, ಸದರಿ ಸೊಪ್ಪನ್ನು ದೂರುದಾರರ ಮಗ ಅಶೋಕ್ ಮತ್ತು ಪ್ರವೀಣ ಹಾಗೂ ಮೂರ್ತಿ ಇವರುಗಳು ಬೀರಪ್ಪ ರವರೊಂದಿಗೆ ಟ್ರಾಕ್ಟರ್‌ನಲ್ಲಿ ತೆಗೆದುಕೊಂಡು ಹೋಗುತ್ತಿದ್ದಾಗ, ರಾತ್ರಿ 9.50ರ ಸಮಯದಲ್ಲಿ ಚಿಂತಾಮಣಿ-ಬಾಗೇಪಲ್ಲಿ ರಸ್ತೆಯ ದೇವಗುಟ್ಟಹಳ್ಳಿ ಗ್ರಾಮದ ರಾಮಾಂಜಿ ಮತ್ತು ಫಾರೆಸ್ಟ್ ಗಾರ್ಡ್ ರವರುಗಳು ಟ್ರಾಕ್ಟರ್‌ನ್ನು ತಡೆದು, ಒಣಗಿರುವ ನೀಲಗಿರಿ ಸೊಪನ್ನು ಅರಣ್ಯದಿಂದ ಏಕೆ ತೆಗೆದುಕೊಂಡು ಹೋಗುತ್ತಿದ್ದೀರಿ ಎಂದು ಪ್ರಶ್ನಿಸಿ ಫಾರೆಸ್ಟ್ ರೇಂಜರ್‌ಗೆ ಫೋನ್ ಮಾಡಿ, ಟ್ರಾಕ್ಟರನ್ನು ಚಿಂತಾಮಣಿ ಅರಣ್ಯ ಇಲಾಖೆಯ ಕಛೇರಿಗೆ ತೆಗೆದುಕೊಂಡು ಹೋಗಿರುತ್ತಾರೆ. ನಂತರ, ಈ ಬಗ್ಗೆ ದೂರುದಾರರು ದಿನಾಂಕ: 15-02-2017 ರಂದು ಚಿಂತಾಮಣಿ ಅರಣ್ಯ ಇಲಾಖೆ ಕಛೇರಿಗೆ ಹೋಗಿ ಟ್ರಾಕ್ಟರ್ ಬಿಡುಗಡೆ ಬಗ್ಗೆ ಕೇಳಲಾಗಿ ಅಲ್ಲಿನ ಅಧಿಕಾರಿಗಳು, ಫೈಲನ್ನು ಚಿಕ್ಕಬಳ್ಳಾಪುರ ಕಛೇರಿಗೆ ಕಳುಹಿಸಿದ್ದು, ಅಲ್ಲಿಗೆ ಹೋಗಿ ದಂಡ ಕಟ್ಟಿಕೊಂಡು ಬರಲು ತಿಳಿಸಿರುತ್ತಾರೆ. ನಂತರ ದೂರುದಾರರು ದಿನಾಂಕ: 17-02-2017 ರಂದು ಚಿಕ್ಕಬಳ್ಳಾಪುರದ ಸೂಲಾಲಪ್ಪನ ದಿನ್ನೆಯಲ್ಲಿರುವ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಛೇರಿ, ಚಿಕ್ಕಬಳ್ಳಾಪುರ ವಿಭಾಗ (ಪ್ರಾದೇಶಿಕ) ಕಛೇರಿಯ 1ನೇ ಎದುರುದಾರರನ್ನು ಭೇಟಿ ಮಾಡಲಾಗಿ, ಅವರು ರೂ.5,000/- ದಂಡ ಕಟ್ಟಬೇಕೆಂದು ತಿಳಿಸಿದ್ದು, 1ನೇ ಎದುರುದಾರರು ದಿನಾಂಕ: 20-02-2017 ರಂದು ರೂ.5000/- ಗಳಿಗೆ ಚಿಕ್ಕಬಳ್ಳಾಪುರ ಎಸ್.ಬಿ.ಎಂ. ಬ್ಯಾಂಕ್‌ನಲ್ಲಿ ಡಿ.ಡಿ.ಯನ್ನು ಆರ್.ಎಫ್.ಓ. ಚಿಕ್ಕಬಳ್ಳಾಪುರ ರವರ ಹೆಸರಿಗೆ ತೆಗೆದುಕೊಂಡು, ಸದರಿ ಡಿ.ಡಿ.ಯನ್ನು 1ನೇ ಎದುರುದಾರರಿಗೆ ನೀಡಿ ಟ್ರಾಕ್ಟರ್ ಬಿಡುಗಡೆ ಬಗ್ಗೆ ಕೇಳಲಾಗಿ, 1ನೇ ಎದುರುದಾರರು ತನಗೆ ರೂ. 3000/- ಲಂಚದ ಹಣ ನೀಡಬೇಕು ಎಂದು ಹಾಗೂ ಅದೇ ಕಛೇರಿಯ ಸೂಪರಿಂಟೆಂಡೆಂಟ್ ಆದ 2ನೇ ಎದುರುದಾರರು ಸಹ ತನಗೆ ರೂ 2000/- ಲಂಚದ ಹಣ ನೀಡಿದರೆ, ಟ್ರಾಕ್ಟರ್‌ನ್ನು ಬಿಡುಗಡೆ ಮಾಡುವುದಾಗಿ ಲಂಚದ ಹಣಕ್ಕಾಗಿ ಒತ್ತಾಯಿಸಿರುತ್ತಾರೆ. ನಂತರ ದೂರುದಾರರ ಸ್ನೇಹಿತ ಶ್ರೀ ವಿ.ವೆಂಕಟೇಶ್ ಬಿನ್ ಲೇಟ್ ವೆಂಕಟರಾಮಪ್ಪ ರವರೊಂದಿಗೆ, ದಿನಾಂಕ: 21-02-2017 ರಂದು ಮಧ್ಯಾಹ್ನ 3.00 ಗಂಟೆ ಸಮಯದಲ್ಲಿ ಉಪ ಅರಣ್ಯ ಸಂರಕ್ಷಣಾಧಿಕಾರಿಗಳ ಕಚೇರಿ, ಚಿಕ್ಕಬಳ್ಳಾಪುರ ವಿಭಾಗ (ಪ್ರಾದೇಶಿಕ) ಚಿಕ್ಕಬಳ್ಳಾಪುರ ಕಛೇರಿಗೆ ಹೋಗಿದ್ದಾಗ, 1ನೇ ಮತ್ತು 2ನೇ ಎದುರುದಾರರನ್ನು ಟ್ರಾಕ್ಟರ್ ಬಿಡುಗಡೆ ಬಗ್ಗೆ ವಿಚಾರಿಸಿದಾಗ, ಇಬ್ಬರಿಗೂ ಸೇರಿ ಒಟ್ಟು ರೂ.5000/- ಲಂಚದ ಹಣ ಕೊಟ್ಟರೆನೇ ಬಿಡುಗಡೆ ಮಾಡುವುದಾಗಿ ಲಂಚದ ಹಣಕ್ಕಾಗಿ ಒತ್ತಾಯಿಸಿರುತ್ತಾರೆ. ದೂರುದಾರರ ಸ್ನೇಹಿತ ಶ್ರೀ ವೆಂಕಟೇಶ್ ರವರು ತನ್ನ ಮೊಬೈಲ್ ನಲ್ಲಿ ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವ ಸಂಭಾಷಣೆ ದಾಖಲಾಗಿರುತ್ತದೆ. ದೂರುದಾರರಿಗೆ ಲಂಚದ ಹಣ ಕೊಡಲು ಇಷ್ಟವಿಲ್ಲದಿದರಿಂದ, ದಿನಾಂಕ: 22-02-2017

ದೂರನ್ನು ಪೊಲೀಸ್ ಇನ್ಸ್‌ಪೆಕ್ಟರ್, ಭ್ರಷ್ಟಾಚಾರ ನಿಗ್ರಹ ದಳ, ಚಿಕ್ಕಬಳ್ಳಾಪುರ, ಇವರಿಗೆ ಕೊಟ್ಟಿರುತ್ತಾರೆ. ಈ ಸಂಬಂಧವಾಗಿ ಮೊ.ಸಂಖ್ಯೆ: 03/2017 ರಲ್ಲಿ ಭ್ರಷ್ಟಾಚಾರ ಪ್ರತಿಬಂಧಕ ಕಾಯ್ದೆ 1988 ಕಲಂ 7ರ ಅಡಿಯಲ್ಲಿ ಪ್ರಕರಣ ದಾಖಲು ಮಾಡಿರುತ್ತಾರೆ. ದೂರುದಾರರು ತನ್ನ ಸ್ನೇಹಿತ ಶ್ರೀ ವೆಂಕಟೇಶ್ ರವರ ಮೊಬೈಲ್‌ನಲ್ಲಿ ಎದುರುದಾರರು ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟಿರುವ ಸಂಭಾಷಣೆಯು ದಾಖಲಾಗಿದ್ದು, ಸದರಿ ಮೊಬೈಲ್‌ನ್ನು ತನಿಖಾಧಿಕಾರಿಯವರಿಗೆ ಹಾಜರುಪಡಿಸಿರುತ್ತಾರೆ.

ii). ದಿನಾಂಕ: 22-02-2017 ರಂದು, ತನಿಖಾಧಿಕಾರಿಯವರು ಪಂಚರಾದ ಶ್ರೀ ಸುರೇಶ ಪಂಚ-1, ಶ್ರೀ ಪಿ.ನಾಗರಾಜು ಪಂಚ-2, ಶ್ರೀ ಬಿ.ವಿ.ಚಂದ್ರಶೇಖರ ರೆಡ್ಡಿ ಪಂಚ-3, ಇವರನ್ನು ಬರಮಾಡಿಕೊಂಡು, ದೂರುದಾರರು 1ನೇ ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 3,000/- (ಹಣದ ಡಿನಾಮಿನೇಷನ್ 2000/- x 1, 500 x 2) ಗಳನ್ನು ಮತ್ತು 2ನೇ ಎದುರುದಾರರಿಗೆ ಕೊಡಲು ತಂದಿದ್ದ ಲಂಚದ ಹಣ 2000/- (ಹಣದ ಡಿನಾಮಿನೇಷನ್ 2000 x 1) ಹಾಗೂ ಲಂಚದ ಹಣಕ್ಕೆ ಬೇಡಿಕೆ ಇದ್ದ ಸಂಭಾಷಣೆ ರೆಕಾರ್ಡ್ ಆಗಿದ್ದ ಮೊಬೈಲ್‌ನ್ನು ಹಾಜರುಪಡಿಸಿರುತ್ತಾರೆ. 1ನೇ ಎದುರುದಾರರಿಗೆ ಕೊಡಲು ತಂದಿದ್ದ ಹಣವನ್ನು ಪಂಚ-1 ಶ್ರೀ ಸುರೇಶರವರು ಹಣದ ಮೌಲ್ಯ ಮತ್ತು ನಂಬರುಗಳನ್ನು ಪರಿಶೀಲಿಸಿದ್ದು, ಪಂಚ-3 ರವರು ಶ್ರೀ ಬಿ.ವಿ.ಚಂದ್ರಶೇಖರ ರೆಡ್ಡಿ ಅದನ್ನು ಹಾಳೆಯಲ್ಲಿ ದಾಖಲಿಸಿರುತ್ತಾರೆ. ನಂತರ 2ನೇ ಎದುರುದಾರರಿಗೆ ತಂದಿದ್ದ ಹಣವನ್ನು ಪಂಚ-2 ಶ್ರೀ ನಾಗರಾಜು ರವರು ಹಣದ ಮೌಲ್ಯ ಪರಿಶೀಲಿಸಿದ್ದು, ಪಂಚ-3 ರವರು ಶ್ರೀ ಬಿ.ವಿ.ಚಂದ್ರಶೇಖರ ರೆಡ್ಡಿ ಅದನ್ನು ಹಾಳೆಯಲ್ಲಿ ದಾಖಲಿಸಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಪಂಚ-1 ರವರು, ಪೊಲೀಸ್ ಸಿಬ್ಬಂದಿಯಿಂದ ಫಿನಾಫ್ತಲೀನ್ ಪೌಡರ್ ಲೇಪಿಸಿದ 3,000/- ರೂ.ಗಳ ಹಣವನ್ನು ಎಣಿಸಿ, ಒಂದು ಪ್ರಸೆಂಟೇಷನ್ ಕವರ್‌ಗೆ ಹಾಕಿ, ಸದರಿ ಹಣವಿದ್ದ ಕವರನ್ನು ದೂರುದಾರರ ಪ್ಯಾಂಟಿನ ಬಲ ಭಾಗದ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರ ಸೂಚನೆಯ ಮೇರೆಗೆ, ಪಂಚ-2 ಇವರು ಪೊಲೀಸ್ ಸಿಬ್ಬಂದಿಯಿಂದ ಫಿನಾಫ್ತಲೀನ್ ಪೌಡರ್ ಲೇಪಿಸಿದ 2,000/- ರೂ.ಗಳ ಹಣವನ್ನು ಎಣಿಸಿ, ಒಂದು ಪ್ರಸೆಂಟೇಷನ್ ಕವರ್‌ಗೆ ಹಾಕಿ, ಸದರಿ ಹಣವಿದ್ದ ಕವರನ್ನು ದೂರುದಾರರ ಶರ್ಟಿನ ಎಡ ಜೇಬಿನಲ್ಲಿ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಯವರು ದೂರುದಾರರಿಗೆ ನಿಗದಿತ ಸೂಚನೆಯನ್ನು ನೀಡಿ, ಎದುರುದಾರರು ಲಂಚದ ಹಣವನ್ನು ಕೇಳಿ ಪಡೆದಾಗ, ದೂರುದಾರರು ಎಡಗೈಯಿಂದ ತನ್ನ ತಲೆ ಸವರಿಕೊಳ್ಳುವ ಮೂಲಕ ಸೂಚನೆ ನೀಡಬೇಕೆಂದು ತಿಳಿಸಿರುತ್ತಾರೆ ಹಾಗೂ ದೂರುದಾರರು ತನ್ನ ಸ್ನೇಹಿತ ಶ್ರೀ ವೆಂಕಟೇಶನ ಮೊಬೈಲ್‌ನ್ನು ಆನ್ ಮಾಡಿಕೊಂಡು ಹೋಗಬೇಕೆಂದು ತಿಳಿಸಿರುತ್ತಾರೆ. ದೂರುದಾರರ ಜೊತೆ ಪಂಚ-1, ಮತ್ತು ಪಂಚ-2 ರವರು ಇದ್ದು, ಘಟನೆಯನ್ನು ಗಮನಿಸಬೇಕೆಂದು ತಿಳಿಸಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ವಹಿಸುವಿಕೆ ಪಂಚನಾಮೆಯನ್ನು ಪಂಚರ ಸಮಕ್ಷಮ ದಿ: 22-02-2017ರಂದು ಮಧ್ಯಾಹ್ನ 1.00 ಗಂಟೆಯಿಂದ 1.30 ಘಂಟೆಯವರೆಗೆ ಬರೆದಿರುತ್ತಾರೆ.

iii). ದಿನಾಂಕ: 22-02-2017 ರಂದು ತನಿಖಾಧಿಕಾರಿಯು, ಸಿಬ್ಬಂದಿ, ದೂರುದಾರರು, ಮತ್ತು ಪಂಚರು ಇವರುಗಳನ್ನು ಠಾಣೆಯಿಂದ ಕರೆದುಕೊಂಡು ಮದ್ಯಾಹ್ನ 2.55 ಕ್ಕೆ ಚಿಕ್ಕಬಳ್ಳಾಪುರ ಬಿ.ವಿ.ರಸ್ತೆಯಲ್ಲಿರುವ ಆಂಜನೇಯ ದೇವಸ್ಥಾನದ ಹತ್ತಿರ ಬಂದಿರುತ್ತಾರೆ. ದೂರುದಾರರು ಪಂಚ-1 ರವರ ಜೊತೆ, 1ನೇ ಎದುರುದಾರರ ಕೊಠಡಿಗೆ ಬಂದಾಗ, 1ನೇ ಎದುರುದಾರರು ದೂರುದಾರರನ್ನು ಕುರಿತು, ಏನಪ್ಪ ನಿನಗೆ ಎಂಡಾರ್ಸ್‌ಮೆಂಟ್ ಅವಶ್ಯಕತೆ ಇಲ್ಲವಾ ಎಂದರು, ಅಂದಿಕೆ ಸಾರ್ ನೇನು ವಚ್ಚಿಂದಿ ಎಂದು ದೂರುದಾರರು ಹೇಳಿರುತ್ತಾರೆ. ಆಗ 1ನೇ ಎದುರುದಾರರು 3000/- ರೂ. ಒಳಗೊಂಡ ಕವರ್‌ನ್ನು ಟೇಬಲ್ ಮೇಲೆ ಇಡುವಂತೆ ತಿಳಿಸಿದಾಗ, ದೂರುದಾರರು ತನ್ನ ಬಳಿ ಇದ್ದ, ಫಿನಾಪ್ತಲೀನ್ ಪೌಡರ ಲೇಪಿತ 3000/- ರೂ.ಗಳಿದ್ದ ಪ್ರಸೆಂಟೇಷನ್ ಕವರ್‌ನ್ನು 1ನೇ ಎದುರುದಾರರ ಟೇಬಲ್ ಮೇಲೆ ಇಟ್ಟದ್ದು, 2ನೇ ಎದುರುದಾರರಿಗೆ ನೀಡಬೇಕಾದ ಹಣವನ್ನು 1ನೇ ಎದುರುದಾರರು ನಾನೇ ನೀಡುತ್ತೇನೆಂದು 2 ಕವರ್ ಗಳನ್ನು ತೆಗೆದು ಇಲ್ಲೇ ಇಡಿ, ಎಂದು ಟೇಬಲ್ ಡ್ರಾಯರ್‌ನ್ನು 1ನೇ ಎದುರುದಾರರು ತೆಗೆದಾಗ, ದೂರುದಾರರು ತನ್ನ ಪ್ಯಾಂಟಿನ ಬಲಜೇಬಿನಲ್ಲಿದ್ದ 2000/- ರೂ. ಎನ್‌ವೆಲಪ್ ಕವರನ್ನು ತೆಗೆದು 2 ಕವರ್ ಗಳನ್ನು ಟೇಬಲ್ ಡ್ರಾನಲ್ಲಿ ಇಟ್ಟದ ನಂತರ, 1ನೇ ಎದುರುದಾರರು ಬೇರೆ ಕಟ್ಟಡಕ್ಕೆ ಹೋಗಿ ದೂರುದಾರರಿಗೆ ಸಂಬಂದಿಸಿದ ಎಂಡಾರ್ಸ್‌ಮೆಂಟ್ ಮತ್ತು ಡಿ.ಡಿ.ಯನ್ನು ತಂದು ಕೊಟ್ಟಿರುತ್ತಾರೆ. ನಂತರ ದೂರುದಾರರು ತನಿಖಾಧಿಕಾರಿಗೆ ನಿಗದಿತ ಸೂಚನೆಯನ್ನು ಕೊಟ್ಟಿರುತ್ತಾರೆ. ಆಗ ಸಮಯ ಮಧ್ಯಾಹ್ನ 3.15 ಆಗಿತ್ತು. ನಂತರ, ದೂರುದಾರರ ನಿಗದಿತ ಸೂಚನೆಯ ಮೇರೆಗೆ ತನಿಖಾಧಿಕಾರಿಯವರು ಸ್ಥಳಕ್ಕೆ ಬಂದಾಗ, ದೂರುದಾರರು ತನಿಖಾಧಿಕಾರಿಗೆ 1ನೇ ಎದುರುದಾರರನ್ನು ತೋರಿಸಿಕೊಟ್ಟಿರುತ್ತಾರೆ. ನಂತರ ತನಿಖಾಧಿಕಾರಿ ತನ್ನನ್ನು 1ನೇ ಎದುರುದಾರರಿಗೆ ಪರಿಚಯಿಸಿಕೊಂಡು, ಎದುರುದಾರರ ವಿರುದ್ಧ ಪ್ರಕರಣ ದಾಖಲಾಗಿರುವುದರ ಬಗ್ಗೆ ತಿಳಿಸಿ, ತನಿಖೆಯನ್ನು ಪ್ರಾರಂಭಿಸಿರುತ್ತಾರೆ. ತನಿಖಾಧಿಕಾರಿಗಳ ಸೂಚನೆ ಮೇರೆಗೆ, 1ನೇ ಎದುರುದಾರರ ಟೇಬಲ್ ಡ್ರಾಯರ್‌ನಲ್ಲಿದ್ದ ಕವರನ್ನು ತೋರಿಸಿದ್ದು, ತನಿಖಾಧಿಕಾರಿಯವರ ಸೂಚನೆ ಮೇರೆಗೆ, ಪಂಚ-1 ರವರು ಎರಡೂ ಕವರ್‌ಗಳನ್ನು ತೆಗೆದು ಟೇಬಲ್ ಮೇಲೆ ಇಟ್ಟಿರುತ್ತಾರೆ. ನಂತರ ತನಿಖಾಧಿಕಾರಿಗಳ ಸೂಚನೆ ಮೇರೆಗೆ, ಪಂಚ-1, 1ನೇ ಎದುರುದಾರರ ಟೇಬಲ್ ಡ್ರಾಯರ್ ಮೇಲಿದ್ದ 2 ಕವರುಗಳನ್ನು ಹತ್ತಿಯಿಂದ ಒರೆಸಿ, ಸದರಿ ಹತ್ತಿಯನ್ನು ಅದನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿದಾಗ, ದ್ರಾವಣವು ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿ ಸೂಚನೆಯಂತೆ ದೂರುದಾರರ 2 ಕೈಬೆರಳುಗಳನ್ನು ಸೋಡಿಯಂ ಕಾರ್ಬೋನೇಟ್ ದ್ರಾವಣದಲ್ಲಿ ಅದ್ದಿ ತೊಳೆದಾಗ, ದ್ರಾವಣ ತಿಳಿಗುಲಾಬಿ ಬಣ್ಣಕ್ಕೆ ಬದಲಾವಣೆಯಾಗಿರುತ್ತದೆ. ನಂತರ ತನಿಖಾಧಿಕಾರಿಯವರು ಪಂಚ-1 ರವರ ವಶದಲ್ಲಿದ್ದ ಲಂಚದ ಹಣವನ್ನು ಪರಿಶೀಲಿಸಿದಾಗ, ಸದರಿ ಹಣ ಪ್ರಾಯೋಗಿಕ ಪಂಚನಾಮೆ ವೇಳೆಯಲ್ಲಿ ನಮೂದು ಮಾಡಲಾಗಿದ್ದ, ಹಣದ ಮೌಲ್ಯ ಮತ್ತು ನಂಬರುಗಳಿಗೆ ತಾಳೆ ಮಾಡಿ ಖಾತ್ರಿ ಪಡಿಸಿಕೊಂಡು ನಂತರ ತನಿಖಾಧಿಕಾರಿ ಅಮಾನತ್ತುಪಡಿಸಿಕೊಂಡಿರುತ್ತಾರೆ. ನಂತರ

ತನಿಖಾಧಿಕಾರಿಯ ಸೂಚನೆ ಮೇರೆಗೆ 1ನೇ ಎದುರುದಾರರು ತಾನು ಲಂಚದ ಹಣ ಪಡೆದ ಬಗ್ಗೆ ಸಮಜಾಯಿಷಿಕೆಯನ್ನು ಕೇಳಲಾಗಿ 1ನೇ ಎದುರುದಾರರು ತನ್ನ ಸಮಜಾಯಿಷಿಕೆಯಲ್ಲಿ, ...."**ನಾನು ಈ ದಿನ ಕಛೇರಿ ಕೆಲಸ ನಿರ್ವಹಿಸುತ್ತಿರುವಾಗ ಅಪರಿಚಿತ ವ್ಯಕ್ತಿ ನನ್ನ ಮೇಜಿನ ಬಳಿ ಬಂದು ಕವರ್ ಇಟ್ಟರು. ಅದನ್ನು ನನಗೆ ಬೇಡವೆಂದು ಹೇಳಿದಾಗ ಅವರು ನನ್ನ ಟೇಬಲ್ ಡ್ರಾಯರ್ ನಲ್ಲಿ ಬಲವಂತವಾಗಿ ಇಟ್ಟಿರುತ್ತಾರೆ. ಆದರೆ ಆ ಕವರನ್ನು ನಿರಾಕರಿಸಿದ್ದು, ಕವರ್ ನ್ನು ಮುಟ್ಟಿರುವುದಿಲ್ಲ ಮತ್ತು ಸದರಿ ವ್ಯಕ್ತಿಯನ್ನು ಕೂಡಲೇ ಆ ಕವರನ್ನು ತೆಗೆದುಕೊಳ್ಳಲು ತಿಳಿಸಿದೆ. ಆದರೆ ಅವರು ತೆಗೆದುಕೊಂಡಿರುವುದಿಲ್ಲ. ನಾನು ಯಾವುದೇ ರೀತಿಯ ಬೇಡಿಕೆಯನ್ನು ಇಟ್ಟಿರುವುದಿಲ್ಲ. ಬದಲಿಗೆ ಎಫ್.ಓ.ಸಿ. ದಂಡ ಮತ್ತು ಮೌಲ್ಯವಾದ 3000/- + 2000/- ಒಟ್ಟು 5000/- ಹಣವನ್ನು ಡಿ.ಡಿ. ಮೂಲಕ ಪಾವತಿಸುವಂತೆ ತಿಳಿಸಿದೆ ಆದರೆ ಸದರಿ ವ್ಯಕ್ತಿಗೆ ಕನ್ನಡ ಭಾಷೆ ಬರುವುದಿಲ್ಲವೆಂದು ತಿಳಿಯುತ್ತದೆ. ನನಗೆ ತೆಲುಗು ಭಾಷೆ ಮಾತನಾಡಲು ಬರುವುದಿಲ್ಲ. ತಪ್ಪಾಗಿ ಅರ್ಥೈಸಿಕೊಂಡು ಅಚಾತುರ್ಯದಿಂದ ತಪ್ಪಾಗಿರುತ್ತದೆ".** ನಂತರ, ತನಿಖಾಧಿಕಾರಿಯವರು 2ನೇ ಎದುರುದಾರರನ್ನು ಕುರಿತು, ಲಂಚದ ಹಣದ ಬಗ್ಗೆ ಸಮಜಾಯಿಷಿಕೆಯನ್ನು ಕೇಳಿದಾಗ, ಆತನು ತನ್ನ ಸಮಜಾಯಿಷಿಯಲ್ಲಿ **"ದಿನಾಂಕ: 22-02-2017 ರಂದು ಎಸಿಬಿ ತಂಡದವರು ದಾಳಿ ನಡೆಸುತ್ತಿದ್ದು, ಸದರಿ ದಿನಾಂಕದಂದು ಹಣವನ್ನು ಯಾರು ಕೊಟ್ಟರು ಹೇಗೆ ತೆಗೆದುಕೊಂಡರು ಎಂಬ ಬಗ್ಗೆ ನನಗೆ ಯಾವುದೇ ವಿಚಾರವು ತಿಳಿದಿರುವುದಿಲ್ಲ ಅಲ್ಲದೇ ಯಾವುದೇ ಹಣದ ಆಮಿಷಕ್ಕೆ ಒಳಗಾಗಿರುವುದಿಲ್ಲ ಮತ್ತು ನಾನು ಹಣ ತೆಗೆದುಕೊಂಡಿರುವುದಿಲ್ಲ. ಅಲ್ಲದೇ ದೂರು ನೀಡಿರುವವರಿಗೆ ಕನ್ನಡ ಗೊತ್ತಿಲ್ಲದಿರುವುದರಿಂದ ಅವರು ಯಾವ ರೀತಿ ದೂರು ನೀಡಿರುತ್ತಾರೆ ಎಂದು ನನಗೆ ತಿಳಿದುಬಂದಿರುವುದಿಲ್ಲ"** ಎಂದು ಸಮಜಾಯಿಷಿಕೆ ನೀಡಿರುತ್ತಾರೆ. ಎದುರುದಾರರುಗಳ ಪ್ರತಿರಕ್ಷಣಾ ಹೇಳಿಕೆಯ ಬಗ್ಗೆ ದೂರುದಾರರು ಮತ್ತು ಪಂಚ-1 ಮತ್ತು 2 ರವರನ್ನು ತನಿಖಾಧಿಕಾರಿಯವರು ಕೇಳಲಾಗಿ, 1 ಮತ್ತು 2ನೇ ಎದುರುದಾರರು ಬರೆದುಕೊಟ್ಟಿರುವ ಪ್ರತಿರಕ್ಷಣಾ ಹೇಳಿಕೆಯು ಸುಳ್ಳೆಂದು ಅವರು ದೂರುದಾರರಿಂದ ಲಂಚದ ಹಣಕ್ಕಾಗಿ ಬೇಡಿಕೆ ಇಟ್ಟು ಪಡೆದಿರುತ್ತಾರೆಂದು ತಿಳಿಸಿರುತ್ತಾರೆ. ತನಿಖಾಧಿಕಾರಿಗಳು ಪ್ರಕರಣಕ್ಕೆ ಸಂಬಂಧಿಸಿದ ಪ್ರಮುಖ ಘಟನಾವಳಿಗಳನ್ನು ಚಿತ್ರೀಕರಿಸಿರುತ್ತಾರೆ. 1 ಮತ್ತು 2ನೇ ಎದುರುದಾರರುಗಳನ್ನು ಅಂದೇ ದಸ್ತಗಿರಿ ಮಾಡಿರುತ್ತಾರೆ. ಈ ಸಂಬಂಧವಾಗಿ ತನಿಖಾಧಿಕಾರಿ ಈ ಸಂಬಂಧವಾಗಿ ದಿನಾಂಕ: 22-02-2017 ರಂದು ಸಂಜೆ 3.30 ರಿಂದ ಸಂಜೆ 5.15 ರವರೆಗೆ 1ನೇ ಎದುರುದಾರರ ಅರಣ್ಯಾಧಿಕಾರಿಗಳ ಕಚೇರಿಯ ಕೊಠಡಿ ಪಂಚನಾಮೆಯನ್ನು ಜರುಗಿಸಿರುತ್ತಾರೆ.

iv). ತನಿಖಾಧಿಕಾರಿಯವರು, ಸಿಡಿಗಳಲ್ಲಿ ದಾಖಲಾದ ಸಂಭಾಷಣೆ ದೂರುದಾರರ ಹಾಗೂ 1 ಮತ್ತು 2ನೇ ಎದುರುದಾರರುಗಳ ಧ್ವನಿಗೆ ಹಾಗೂ ಅವರುಗಳ ಮಾದರಿ ಧ್ವನಿಗೆ ಹೋಲಿಕೆ ಸಂಬಂಧವಾಗಿ ವರದಿಯನ್ನು ಕೋರಿ ವಿಧಿ ವಿಜ್ಞಾನ ಪ್ರಯೋಗಾಲಯಕ್ಕೆ ಕಳುಹಿಸಿರುತ್ತಾರೆ.

v). ರಾಸಾಯನಿಕ ತಜ್ಞರ ಪರೀಕ್ಷಾ ವರದಿಯಲ್ಲಿ 1ನೇ ಎದುರುದಾರರಿಂದ ತನಿಖಾಧಿಕಾರಿಗಳು ಸಂಗ್ರಹಿಸಿದ ಮುದ್ದೆ ಮಾಲುಗಳಲ್ಲಿ ಫಿನಾಫ್ತಿಲೀನ್ ಅಂಶ ಇರುವುದು ದೃಢಪಟ್ಟಿದೆ.

vi) 1ನೇ ಎದುರುದಾರರಿಗೆ ದಿ: 28/09/2021 ಮತ್ತು 2ನೇ ಎದುರುದಾರರಿಗೆ ದಿ: 05/10/2021 ರಂದು ಪರಿವೀಕ್ಷಣಾ ಟಿಪ್ಪಣಿಗೆ ಸಮಜಾಯಿಷಿ / ವಿವರಣೆಯನ್ನು ಕೇಳಲಾಗಿದ್ದು, 1 ಮತ್ತು 2ನೇ ಎದುರುದಾರರು ತಮ್ಮ ವಿವರಣೆಯನ್ನು ದಿ: 11/10/2021 ರಂದು ಸಲ್ಲಿಸಿರುತ್ತಾರೆ. ಸದರಿ ವಿವರಣೆಯನ್ನು ಪರಿಶೀಲಿಸಲಾಗಿ, 1ನೇ ಎದುರುದಾರರು ತನ್ನ ವಿವರಣೆಯಲ್ಲಿ ಭ್ರಷ್ಟಾಚಾರ ನಿಗ್ರಹ ದಳದವರು ತನ್ನ ವಿರುದ್ಧ ದೂರನ್ನು ಮಾನ್ಯ ಪ್ರಧಾನ ಜಿಲ್ಲಾ ಸತ್ರ ನ್ಯಾಯಾಲಯ, ಚಿಕ್ಕಬಳ್ಳಾಪುರ, ಪ್ರಕರಣ ಸಂಖ್ಯೆ: ಎಸ್‌ಪಿಲ್:ಸಿ:182/2018 ರಲ್ಲಿ ದಾಖಲಿಸಿದ್ದು, ಸದರಿ ಪ್ರಕರಣ ವಿಚಾರಣೆಯಲ್ಲಿರುತ್ತದೆ. ಸದರಿ ಪ್ರಕರಣ ಬಾಕಿ ಇರುವಾಗ, ಇಲಾಖಾ ಪ್ರಕರಣ ಮೊದಲು ನಡೆಸಿದರೆ, ತನ್ನ ರಕ್ಷಣೆಗೆ ಆತಂಕವಾಗುತ್ತದೆ. ಹಾಗಾಗಿ ಕ್ರಿಮಿನಲ್ ಪ್ರಕರಣ ಮುಕ್ತಾಯವಾಗುವವರೆವಿಗೂ ಇಲಾಖಾ ವಿಚಾರಣೆಯನ್ನು ಮುಂದೂಡಬೇಕೆಂದು ಕೋರಿಕೊಂಡಿರುತ್ತಾರೆ. 2ನೇ ಎದುರುದಾರರು ತನ್ನ ವಿವರಣೆಯಲ್ಲಿ ಪರಿವೀಕ್ಷಣಾ ಟಿಪ್ಪಣಿಯಲ್ಲಿ ಆರೋಪಿಸಲಾದ ಎಲ್ಲಾ ಅಂಶಗಳನ್ನು ಸಾರಸಗಟಾಗಿ ಅಲ್ಲಗಳೆದಿರುತ್ತಾರೆ. ಹಾಗೂ ತನಿಖಾಧಿಕಾರಿಗಳು ಸತ್ಯಾಂಶವನ್ನು ಪರಿಶೀಲಿಸದೆ ಸುಳ್ಳು ಮೊಕದ್ದಮೆ ಹೂಡಿರುತ್ತಾರೆ. ಟ್ರ್ಯಾಪ್ ಮಹಜರ್ ತನ್ನ ಉಪಸ್ಥಿತಿಯಲ್ಲಿ ನಡೆಸಿರುವುದಿಲ್ಲ. ತಾನು ದೂರುದಾರರ ಜೊತೆ ಯಾವುದೇ ರೀತಿಯ ಸಂಭಾಷಣೆಯನ್ನು ಮಾಡಿರುವುದಿಲ್ಲ. ತನ್ನ ವಿರುದ್ಧ ಈಗಾಗಲೇ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ ಚಿಕ್ಕಬಳ್ಳಾಪುರ ನ್ಯಾಯಾಲಯದಲ್ಲಿ ಪ್ರಕರಣದ ಸಂಖ್ಯೆ: ಎಸ್‌ಪಿಎಲ್:ಸಿ: 182/2018 ರಲ್ಲಿ ಪ್ರಕರಣ ಚಾಲ್ತಿಯಲ್ಲಿದ್ದು, ಕ್ರಿಮಿನಲ್ ಪ್ರಕರಣ ಮುಕ್ತಾಯವಾಗುವರೆಗೂ ಇಲಾಖಾ ವಿಚಾರಣೆಯನ್ನು ಕೈ ಬಿಡಬೇಕೆಂದು ಕೋರಿರುತ್ತಾರೆ. 1 ಮತ್ತು 2ನೇ ಎದುರುದಾರರು ನೀಡಿರುವ ಸಮಜಾಯಿಷಿಕೆಯನ್ನು ಈ ಹಂತದಲ್ಲಿ ಪರಿಗಣಿಸಲು ಬರುವುದಿಲ್ಲ. ಎದುರುದಾರರನ್ನು ವಿಚಾರಣೆ ಮಾಡಲು ಇರಲು ಸೂಕ್ತ ಕಾರಣಗಳು ಕಂಡು ಬಂದಿರುವುದಿಲ್ಲ, ಸಾಕ್ಷಿದಾರರ ಹೇಳಿಕೆಗಳು, ದೂರು ಅರ್ಜಿ ಹಾಗೂ ತನಿಖಾಧಿಕಾರಗಳು ಸಂಗ್ರಹಿಸಿದ ದಾಖಲೆ ಮತ್ತು ಇತರೆ ಅಂಶಗಳು ಮೇಲ್ನೋಟಕ್ಕೆ ಕಂಡುಬರುತ್ತದೆ.

3. ಕಡತದಲ್ಲಿರುವ ಸಂಗತಿಗಳು ಹಾಗೂ ದಾಖಲಾತಿಗಳಿಂದ 1 ಮತ್ತು 2ನೇ ಎದುರುದಾರರು ಸರ್ಕಾರಿ/ಸಾರ್ವಜನಿಕ ನೌಕರರಾಗಿ ಪರಿಪೂರ್ಣ ಪ್ರಾಮಾಣಿಕತೆ, ಸಂಪೂರ್ಣ ಕರ್ತವ್ಯ ನಿಷ್ಠೆ ತೋರಿಸದೆ, ಸರ್ಕಾರಿ ಸೇವಕರಿಗೆ ತರವಲ್ಲದ ರೀತಿಯಲ್ಲಿ ನಡೆದುಕೊಂಡು ದುರ್ವತನೆ / ದುರ್ನಡತೆ ಎಸಗಿರುವುದು ಮೇಲ್ನೋಟಕ್ಕೆ ಕಂಡು ಬರುತ್ತದೆ.

5. ಆದುದರಿಂದ, 1 ಮತ್ತು 2ನೇ ಎದುರುದಾರರ ವಿರುದ್ಧ ಕರ್ನಾಟಕ ನಾಗರೀಕ ಸೇವಾ (ನಡತೆ) ನಿಯವಳಿ 1966 ರ (ಪ್ರಸ್ತುತ ಕರ್ನಾಟಕ ನಾಗರೀಕ ಸೇವಾ (ನಡೆತೆ) 2021), ನಿಯಮ 3(1) (i) ರಿಂದ (iii)ರ ಉಲ್ಲಂಘನೆಗಾಗಿ ಶಿಸ್ತು ಕ್ರಮ ಕೈಗೊಳ್ಳಲು ಕರ್ನಾಟಕ ಲೋಕಾಯುಕ್ತ ಕಾಯಿದೆ ಕಲಂ 12(3) ರ ಅಡಿ ಪ್ರದತ್ತವಾದ ಅಧಿಕಾರದಡಿ, ಈ ವರದಿಯ ಮೂಲಕ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸ್ಸು ಮಾಡಲಾಗುತ್ತಿದೆ ಹಾಗೂ ಎದುರುದಾರರ ವಿರುದ್ಧ ಇಲಾಖಾ ವಿಚಾರಣೆ ಮಾಡಲು, ಕರ್ನಾಟಕ ನಾಗರೀಕ ಸೇವಾ (ವರ್ಗೀಕರಣ, ನಿಯಂತ್ರಣ ಮತ್ತು ಮೇಲ್ಮನವಿ) ನಿಯಮಾವಳಿ 1957 ರ ನಿಯಮ 14(ಎ) ರಡಿ ಉಪಲೋಕಾಯುಕ್ತರಿಗೆ ವಹಿಸಬೇಕೆಂದು ಕೋರಿದೆ.

6. ಮುಂದುವರೆದು, ಕರ್ನಾಟಕ ಲೋಕಾಯುಕ್ತ ಕಾಯಿದೆ 1984 ಕಲಂ 12(4) ರ ಪ್ರಕಾರ ಸಕ್ಷಮ ಪ್ರಾಧಿಕಾರವು, ಈ ವರದಿಯ ಮೇಲೆ ಏನು ಕ್ರಮ ಕೈಗೊಂಡಿದೆ ಅಥವಾ ಏನು ಕ್ರಮ ಕೈಗೊಳ್ಳಲಾಗುತ್ತದೆ ಎಂಬುದರ ಬಗ್ಗೆ ಈ ವರದಿಯನ್ನು ಸ್ವೀಕರಿಸಿದ ಮೂರು ತಿಂಗಳೊಳಗೆ ಈ ಪ್ರಾಧಿಕಾರಕ್ಕೆ ತಿಳಿಸಲು ಹೇಳಿದೆ.

ಸಂಬಂಧಪಟ್ಟ ದಾಖಲೆಗಳನ್ನು ಲಗತ್ತಿಸಿದೆ.

28/1/22

(ನ್ಯಾಯಮೂರ್ತಿ ಬಿ.ಎಸ್.ಪಾಟೀಲ್)
ಉಪಲೋಕಾಯುಕ್ತರು-1
ಕರ್ನಾಟಕ ರಾಜ್ಯ, ಬೆಂಗಳೂರು